ಕೊಡುತ್ತೇವೆ ಎನ್ನುವ ಭರವಸೆಯನ್ನು ಈ ಸದನದಲ್ಲಿ ಕೊಡುತ್ತೀರೆಂದು ನಾನು ಭಾವಿಸುತ್ತೇನೆ.

ಶ್ರೀ ಹೆಚ್.ಡಿ. ದೇವೇಗೌಡ : 1983 ರಲ್ಲಿ ಅಧಿಕಾರಕ್ಕೆ ಬಂದಂತಹ ಅಂದಿನ ಸರ್ಕಾರ ಯಾರು ಯೂನಿವರ್ಸಿಟಿಯಲ್ಲಿ ಪೋಸ್ಟ್ ಗ್ರಾಜ್ಯುಯೇಟ್‌ನಲ್ಲಿ ಅತ್ಯಂತ ಪ್ರಥಮ ದರ್ಜೆಯಲ್ಲಿ ಪಾಸು ಮಾಡುತ್ತಾರೋ ಅಂತಹವರಿಗೆ ನೇರ ನೇಮಕಾತಿ ಕೊಡತಕ್ಕ ಒಂದು ವ್ಯವಸ್ಥೆಯನ್ನು ಜಾರಿಗೆ ತಂದಿದೆ. ಅದರ ಅಂಗವಾಗಿ ಕೆಲವು ನಿರ್ಣಯ ಮಾಡಿದ್ದೇವೆ. ರೂಲ್ಸ್‌ನ್ನು ಫ್ರೇಮ್ ಮಾಡಿದ್ದುದು ದಿನಾಂಕ 14.4.85ರಲ್ಲಿ ಸೆಲೆಕ್ಷನ್ ಮೇಡ್ 1985ರಲ್ಲಿ, Rules were challenged in 1986. K.A.T. upheld the rules in 1989. Based on the directions of KAT, detailed guidelines were issued on 11.7.89. Selections were made in 1991. Selection challenged in Supreme Court. Supreme Court disposed of th case in 1992.

1993ರಲ್ಲಿ ಒಂದು ಬ್ಯಾಚ್ ಅಪಾಯಿಂಟ್‌ಮೆಂಟ್ ಮಾಡಿದ್ದೇವೆ. During academic year appointment were made.

'ಎ' ಗುಂಪಿನಿಂದ 15 ಮತ್ತು 'ಬಿ' ಗುಂಪಿನಿಂದ 26. Action is being taken to complete the recruitment of academic year 1984-85 to 1993-95.

ಈಗ ಇದರೊಳಗೆ ಒಂದು ಕಂಡೀಷನ್ ಏನಿದೆ ಎಂದರೆ ಯಾವ ಇಲಾಖೆಯಲ್ಲಿ 'ಎ' ಮತ್ತು 'ಬಿ' ಶ್ರೇಣಿಯಲ್ಲಿ ಎಸ್.ಸಿ.ಎಸ್.ಟಿ. ಹುದ್ದೆ ಶೇಕಡಾ 15 3 ಭರ್ತಿ ಆಗಿಲ್ಲವೋ ಅಲ್ಲಿ ಮಾತ್ರ ಅಪ್ಲೈ ಆಗುತ್ತದೆ. ಆ ಷರತ್ತಿನ ಮೇಲೆ ಈ ರೂಲ್ಸ್‌ನ್ನು ಅಪ್ರೂಲ್ ಅಲ್ಲಿ ಮಾತ್ರ ಅಪ್ಲೈ ಆಗುತ್ತದೆ. ಆ ಷರತ್ತಿನ ಮೇಲೆ ಈ ರೂಲ್ಸ್‌ನ್ನು ಅಪ್ರೂವ್ ಮಾಡಿದ್ದಾರೆ. ಪರಿಶಿಷ್ಟ ಪಂಗಡದ ಹುದ್ದೆಗಳು ಈಗಾಗಲೇ ಶೇಕಡ 3 ರಷ್ಟು ಭರ್ತಿ ಆಗಿದ್ದರೆ ಅಲ್ಲಿ ಅಪ್ಲೈ ಆಗುವುದಿಲ್ಲ. ಇದು ಈಗಿರುವ ನಿಯಮಗಳು. ಅದರ ವ್ಯಾಪ್ತಿಯಲ್ಲಿ ಇರುವ ವಿಕೇನ್ನಿ ಹೇಳಿದ್ದೇನೆ. ಒಟ್ಟು 11 ವಿಕೇನ್ನಿ ಇವೆ. ಅವನ್ನು ಭರ್ತಿ ಮಾಡಲಿಕ್ಕೆ ಪ್ರಯತ್ನ ಪಡುತ್ತೇವೆ.

ಶ್ರೀ ಎಂ.ಹೆಚ್. ಜಯಪ್ರಕಾಶ್ ನಾರಾಯಣ : ಸ್ವಾಮಿ, ಈಗಾಗಲೇ ಎಸ್.ಸಿ. ಎಸ್.ಟಿ.ಗೆ ರಿಕ್ರೂಟ್‌ಮೆಂಟ್ ಮೀಸಲಾತಿ ಶೇಕಡ 15.3ರ ಪ್ರಮಾಣದಲ್ಲಿದ್ದು ಇದನ್ನು ನಾನು ಭರ್ತಿ ಮಾಡಲಿಕ್ಕೆ ಅವಕಾಶ ಕಲ್ಪಿಸುತ್ತೇನೆ ಎಂದು ಅಭಯವನ್ನು ನೀಡುತ್ತಿದ್ದೀರಿ. ಆದರೆ ಈಗ ರಾಜ್ಯದಲ್ಲಿ ಕ್ಲಾಸ್ - 1, ಕ್ಲಾಸ್ - 2, ಕ್ಲಾಸ್ - 3 ಮತ್ತು ಕ್ಲಾಸ್ - 4 ರಲ್ಲಿ ಎಸ್.ಸಿ. ಎಸ್.ಟಿ.ಯವರು ಯಾವ ಯಾವ ಪ್ರಮಾಣದಲ್ಲಿದ್ದಾರೆ.

ಶ್ರೀ ಹೆಚ್.ಡಿ. ದೇವೇಗೌಡ : ಕ್ಲಾಸ್ - 1 ಮತ್ತು ಕ್ಲಾಸ್ - 2ಗೆ ಮಾತ್ರ ನೇರ ನೇಮಕಾತಿ ಇದೆ. ಕ್ಲಾಸ್ - 3 ಮತ್ತು ಕ್ಲಾಸ್ - 4 ಕ್ಕೆ ಇದು ಅನ್ವಯವಾಗುವುದಿಲ್ಲ. ಇದಕ್ಕೆ ಸಪರೇಟ್ ಪ್ರಶ್ನೆ ಕೇಳಿದರೆ ಉತ್ತರ ಹೇಳಬಹುದು.

ಬೆಣ್ಣೆ ತೊರೆ ನೀರಾವರಿ ಯೋಜನೆ

244 - ಶ್ರೀ ರೇವುನಾಯಕ್ ಬೆಳಮಗಿ (ಕಮಲಾಪುರ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬೆಣ್ಣೆತೋರೆ ನೀರಾವರಿ ಯೋಜನೆಯ ಅಂದಾಜು ವೆಚ್ಚವೆಷ್ಟು, ನೀರಾವರಿ ಪ್ರದೇಶವೆಷ್ಟು ಹಾಗೂ ಇದಕ್ಕೆ ಖರ್ಚಾಗಿರುವ ಹಣವೆಷ್ಟು;*

ಆ) *ಈ ಯೋಜನೆಗೆ ಪ್ರಸ್ತುತ ಸಾಲಿನಲ್ಲಿ ಮಂಜೂರಾದ ಹಣವೆಷ್ಟು, ಖರ್ಚಾದ ಹಣವೆಷ್ಟು ಮತ್ತು ಈ ಯೋಜನೆಯಲ್ಲಿ ಕೆಲಸ ಮಾಡುತ್ತಿರುವ ಸಿಬ್ಬಂದಿ ಎಷ್ಟು;*

ಇ) ಪೂರ್ಣ ಕಾರ್ಯ ಮುಗಿಸಿ ಅಪೇಕ್ಷಿತ ಭೂಮಿಗೆ ಎಂದಿನಿಂದ ಪೂರ್ಣ ನೀರು ಒದಗಿಸಲಾಗುವುದು?

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯ ಮಂತ್ರಿಗಳು) :

ಅ) ರೂ. 7323 ಲಕ್ಷಗಳು (90-91ರ ದರಪಟ್ಟಿ ಪ್ರಕಾರ) 20234 ಹೆಕ್ಟೇರುಗಳು ರೂ. 4118 ಲಕ್ಷಗಳು

ಆ) ರೂ. 800 ಲಕ್ಷಗಳು. ಫೆಬ್ರುವರಿ - 95ರ ವರೆಗೆ ಆದ ವೆಚ್ಚ ರೂ. 443 ಲಕ್ಷಗಳು. ಕೆಲಸ ಮಾಡುತ್ತಿರುವ ಸಿಬ್ಬಂದಿ - 80.

ಇ) 1993ರಲ್ಲಿ ಪೂರ್ಣವಾಗಿ ನೀರಾವರಿ ಒದಗಿಸಲು ಯೋಜಿಸಲಾಗಿದೆ.

ಶ್ರೀ ರೇವು ನಾಯಕ್ ಬೆಳಮಗಿ : ಮಾನ್ಯ ಮುಖ್ಯಮಂತ್ರಿಗಳೇ, 1972ರಲ್ಲಿ ಬೆಣ್ಣೆತೊರೆ ಪ್ರಾಜೆಕ್ಟ್‌ಗೆ 12 ಕೋಟಿ ರೂಪಾಯಿಗಳ ಎಸ್ಟಿಮೇಟ್ ಕಾಸ್ಟ್ ಇತ್ತು. ಇದುವರೆಗ 16 ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ. ಆದರೂ ಕೆಲಸ ಪೂರ್ತಿಯಾಗಿಲ್ಲ. ಈಗ ಅದರ ಎಸ್ಟಿಮೇಟ್ ಕಾಸ್ಟ್ 60 ಕೋಟಿ ರೂಪಾಯಿಗಳಿಗೆ ಮುಟ್ಟಿದೆ. ಈ ಪ್ರಾಜೆಕ್ಟ್‌ನ್ನು ನಾವು ಕಾಣುತ್ತೇವೋ ಇಲ್ಲವೋ ಎಂದು ನನಗೆ ಭಯವಾಗುತ್ತಿದೆ. ಏಕೆಂದರೆ ಅಲ್ಲಿ ಕೆಲಸ ಬಹಳ ವಿಳಂಬವಾಗಿದೆ. ನಾನು ಈ ಪ್ರಾಜೆಕ್ಟ್‌ಗೆ ಮುಟ್ಟಿದೆ. ಈ ಪ್ರಾಜೆಕ್ಟ್‌ನ್ನು ನಾವು ಕಾಣುತ್ತೇವೋ ಇಲ್ಲವೋ ಎಂದು ನನಗೆ ಭಯವಾಗುತ್ತಿದೆ. ಏಕೆಂದರೆ ಅಲ್ಲಿ ಕೆಲಸ ಬಹಳ ವಿಳಂಬವಾಗಿದೆ. ನಾನು ಈ ಪ್ರಾಜೆಕ್ಟ್‌ಗೆ ಭೇಟಿ ಕೊಟ್ಟಿದ್ದೆ. ಅಲ್ಲಿ ಕೆಲಸ ಸ್ಥಗಿತಗೊಂಡಿದೆ. ಹಣ ಇಲ್ಲ ಎಂದು ಹೇಳಿದ್ದಾರೆ. ಆದರೆ, ನೀವು ಇಲ್ಲಿ 89 ಕೋಟಿ ರೂಪಾಯಿಗಳನ್ನು ನಾವು ಈಗಾಗಲೇ ಬಿಡುಗಡೆ ಮಾಡಿದ್ದೇವೆಂದು ಒಂದು ಹೇಳಿಕೆಯನ್ನು ಕೊಟ್ಟಿದ್ದೀರಿ. ಹಿಂದಿನ ಸರ್ಕಾರದವರು ಮತ್ತು ನೀವು ಎಷ್ಟು ಹಣ ಬಿಡುಗಡೆ ಮಾಡಿದ್ದೀರಿ? ಸ್ವಲ್ಪ ಮಾಹಿತಿ ಕೊಡಬೇಕು ಮತ್ತು 1998ರೊಳಗೆ ಈ ಪ್ರಾಜೆಕ್ಟ್‌ನ್ನು ಮುಗಿಸುತ್ತೇವೆಂದು ಹೇಳಿದ್ದೀರಿ. ಆದರೆ ಉತ್ತರ ಕರ್ನಾಟಕಕ್ಕೆ ಬಹಳ ಅನ್ಯಾಯವಾಗುತ್ತಿದೆ. ಇದು ಸರಿಯಲ್ಲ ಎಂದು ನಾನು ಅಭಿಪ್ರಾಯ ವ್ಯಕ್ತಪಡಿಸುತ್ತೇನೆ. ಏಕೆಂದರೆ ಬಹಳಷ್ಟು ರೈತರು ತೊಂದರೆಗೀಡಾಗಿದ್ದಾರೆ. ಅಲ್ಲಿ ಪುನರ್ ವಸತಿ ಸಲುವಾಗಿ ಮಾಡಲಾಗಿರುವ ಎಸ್ಟಿಮೇಟ್ ಕಾಸ್ಟ್ 50 ಸಾವಿರ ಮನೆಗಳಿಗೆ 1 ಲಕ್ಷ ರೂಪಾಯಿಗಳು ಮಾಡಿದ್ದಾರೆ. 1 ಲಕ್ಷ ಮನೆಗಳಿಗೆ 60 ಸಾವಿರ ರೂಪಾಯಿಗಳು ಮಾಡಿದ್ದಾರೆ. ಆದು ಸಾಕಾಗುವುದಿಲ್ಲ ಎಂದು ಡಿ.ಸಿ.ಯನ್ನು ಫೇರಾವ್ ಮಾಡಿದಾಗ, ಅವರು ಪುನಃ ಎಸ್ಟಿಮೇಟ್ ಮಾಡಿದ್ದಾರೆ. ಸತ್ಯ ಸಂಗತಿ ಏನು? ಎಸ್ಟಿಮೇಟ್ ಅನ್ಯಾಯ ಸರಿಪಡಿಸಿ ಎಂದರೂ ಅದು ನಿಮ್ಮ ಸರ್ಕಾರಕ್ಕೆ ಮುಟ್ಟಿಲ್ಲ. ಇದರ ಬಗ್ಗೆ ಈವರೆಗೂ ಪೆಂಡಿಂಗ್ ಇದೆ ಎಂದು ಹೇಳುತ್ತೇನೆ. ನಮಗೆ ನ್ಯಾಯ ಬೇಕು. ಎಷ್ಟರಮಟ್ಟಿಗೆ ಬೇಗ ಮುಗಿಸುತ್ತೀರೆಂಬುದನ್ನು ಹೇಳಬೇಕು.

ಶ್ರೀ ಹೆಚ್.ಡಿ. ದೇವೇಗೌಡ : ನೀವು ಹೇಳಿದ ಎಲ್ಲಾ ವಿಷಯಗಳನ್ನು ಗಮನದಲ್ಲಿಟ್ಟುಕೊಂಡು 1998ರೊಳಗೆ ಮುಗಿಸಲು ಪ್ರಯತ್ನಿಸುತ್ತೇವೆ.

ಅಧ್ಯಕ್ಷರು : ಈಗ ಪ್ರಶ್ನೋತ್ತರ ಅವಧಿ ಮುಗಿಯಿತು. ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು. ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳಲ್ಲಿ ಪ್ರಶ್ನೆ ಸಂಖ್ಯೆ 240 ಮತ್ತು 251 ಸರ್ವಶ್ರೀ ಸುರೇಶ್‌ಕುಮಾರ್‌ರವರದ್ದು ಮತ್ತು ರಾಜಣ್ಣನವರು ಕಳುಹಿಸಿರತಕ್ಕ ಪ್ರಶ್ನೆಗಳಿಗೆ ಸನ್ಮಾನ್ಯ ಮುಖ್ಯಮಂತ್ರಿಗಳು ಒಂದು ವಾರ ಕಾಲಾವಧಿ ಕೇಳಿದ್ದಾರೆ. ಉತ್ತರಗಳನ್ನು ಅನಂತರ ಒದಗಿಸಲಾಗುವುದು.

ಶ್ರೀ ಎಂ.ಸಿ. ನಾಣಯ್ಯ (ಕಾನೂನು, ಸಂಸದೀಯ ವ್ಯವಹಾರಗಳು, ವಾರ್ತಾ ಮತ್ತು ಪ್ರಚಾರ ಇಲಾಖೆ ಮಂತ್ರಿಗಳು) : ಈಗ ಲಿಖಿತ ಮೂಲಕ ಉತ್ತರಿಸುವ 36 ಪ್ರಶ್ನೆಗಳ ಪೈಕಿ 32 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಪ್ರಶ್ನೋತ್ತರಗಳು

ಲಾಕಪ್‌ಗಳಲ್ಲಿ ಸತ್ತಿರುವ ಬಗ್ಗೆ

232 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಜನವರಿ 1995 ರಿಂದ ಮಾರ್ಚ್ 10 ರವರೆಗೆ ಪೋಲೀಸ್ ಠಾಣೆಗಳ ಲಾಕಪ್‌ಗಳಲ್ಲಿ ಸತ್ತಿರುವವರ ಸಂಖ್ಯೆ ಎಷ್ಟು? (ಎಲ್ಲೆಲ್ಲಿ ಮತ್ತು ಯಾವ ಯಾವಾಗ ಎಂಬ ವಿವರಗಳನ್ನು ಒದಗಿಸುವುದು)

ಶ್ರೀ ಪಿ.ಆರ್.ಜಿ ಸಿಂಧ್ಯಾ (ಗೃಹ ಮಂತ್ರಿಗಳು) :

ಅ) -ಎರಡು-

1) ಬೆಂಗಳೂರು ನಗರದ ವಿಜಯನಗರದ ಪೋಲೀಸ್ ಠಾಣೆಯಲ್ಲಿ ದಿನಾಂಕ 1-2-1995 ರಂದು ಮಾರೇನ ಹಳ್ಳಿಯ ಶ್ರೀ ರಾಜಣ್ಣನವರನ್ನು ಚೀಟಿಯ ಹಣ ಸಂಬಂಧದಲ್ಲಿ ಠಾಣೆಗೆ 6 ಘಂಟೆಗೆ ಕರೆತಂದಿದ್ದು ಆತನು ಬೆಂಚಿನ ಮೇಲೆ ಕುಳಿತಿದ್ದಾಗ (ಲಾಕಪ್‌ನಲ್ಲಿ ಅಲ್ಲ) ಇದ್ದಕ್ಕಿದಂತೆ ಕೆಳಗೆ ಬಿದ್ದರು. ತಕ್ಷಣವೇ ಅವರನ್ನು ಶರಾಮತಿ ನರ್ಸಿಂಗ್ ಹೋಂಗೆ ಕಳುಹಿಸಿ ಕೊಡಲಾಯಿತು. ವೈದ್ಯಧಿಕಾರಿಗಳು ಸದರಿ ಶ್ರೀ ರಾಜಣ್ಣ ಮೃತ ಪಟ್ಟಿರುತ್ತಾರೆಂದು ತಿಳಿಸಿದ ಮೇರೆಗೆ ಪಿ.ಎಸ್.ಐ. ಶ್ರೀ ಮಹದೇವಯ್ಯನವರು ಸ್ವಪ್ರೇರಣೆಯಿಂದ ಯುಡಿಆರ್ ನಂ. 5/95 ಕಲಂ 174 ಸಿಆರ್‌ಪಿಸಿ ಪ್ರಕಾರಾ ಪ್ರಕರಣ ದಾಖಲು ಮಾಡಿಕೊಂಡು ನುಂದಿನ ಕ್ರಮ ಕೈಗೊಂಡಿರುತ್ತಾರೆ.

ಸರ್ಕಾರದ ನೀತಿಯಂತೆ ಪೋಲೀಸ್ ಠಾಣೆಗಳಲ್ಲಿ ಸತ್ತವರ ಬಗ್ಗೆ ಪ್ರಕರಣವನ್ನು ಸಿಒಡಿಗೆ ವಹಿಸಲಾಗಿದ್ದು ಸಿಒಡಿ ತನಿಖೆಯು ಇದೊಂದು ಹೃದ್ರೋಗದಿಂದ ಆಗಿರುವ ಮೃತ್ಯುವೆಂದು ತಿಳಿದು ಬಂದಿದ್ದು, ಈ ಮೊಕದ್ದಮೆಯನ್ನು ಮುಕ್ತಾಯ ಗೊಳಿಸಲಾಗಿದೆ.

2) ಬೆಂಗಳೂರು ನಗರದ ಫ್ರೇಜರ್ ಟೌನ್ ಪೋಲೀಸ್ ಠಾಣೆ ಯುಡಿಆರ್ 2/95 ಕಲಂ 174 ಸಿಆರ್‌ಪಿಸಿ ಪ್ರಕಾರ ದಾಖಲಾದ ಪ್ರಕರಣ.

ದಿನಾಂಕ 16-2-1995 ರಂದು ಮಧ್ಯಾಹ್ನ 12.40ರ ಸಮಯದಲ್ಲಿ ಹಚಿನ್ಸ್ ರಸ್ತೆಯಿಂದ ಪರೇರಾ ಎಂಬುವರು ದೂರವಾಣಿಯ ಮೂಲಕ ಹಚಿನ್ಸ್ ರಸ್ತೆ 5ನೇ ಕ್ರಾಸ್‌ನಲ್ಲಿ ಓರ್ವ ವ್ಯಕ್ತಿ ಗಲಾಟೆ ಮಾಡುತ್ತಿರುತ್ತಾನೆಂದು ತಿಳಿಸಿದ ಮೇರೆಗೆ ಪೋಲೀಸ್ ಠಾಣಾ ಸಿಬ್ಬಂದಿಯವರು ಸ್ಥಳಕ್ಕೆ ಧಾವಿಸಿ ಆ ವ್ಯಕ್ತಿಯನ್ನು (ಶ್ರೀ ಗೋಪಾಲಕೃಷ್ಣ) ಠಾಣೆಗೆ ವಿಚಾರಣೆಗೆ ಕರೆದು ತಂದರು. ಅದೇ ಸ್ಥಳದಿಂದ ಅಂದರೆ ಹಚಿನ್ಸ್ ರಸ್ತೆಯಿಂದ ಶ್ರೀ ರಾಮನಾಥ ಎಂಬುವರು ಠಾಣೆಗೆ ಬಂದು ತಮ್ಮ ಮನೆಯ ಕಿಟಕಿ ಗ್ಲಾಸುಗಳನ್ನು ಹೊಡೆದು ಹಾಕಿರುವುದಾಗಿಯು ಕೂಡಿತದ ಆಮಲಿನಲ್ಲಿ ಬುದ್ಧಿ ಭ್ರಮಣೆಯಾದವನಂತೆ ಹುಚ್ಚನ ಹಾಗೆ ವರ್ತಿಸುತ್ತಿದ್ದನೆಂದು ಆತನ್ನು ಬಾಯಿ ಮಾತಿನಲ್ಲಿಯೇ ಎಚ್ಚರಿಕೆ ನೀಡಿ ಕಳುಹಿಸಿಕೊಡುವಂತೆ ಕೋರಿರುತ್ತಾರೆ. ಅದೇ ರೀತಿ ಅಪರಾಧ ವಿಭಾಗದ ಪಿಎಸ್‌ಐ ಕ್ರೈಮ್-2 ಶ್ರೀ ನರೇಂದ್ರ ಬಾಬು ಬುದ್ಧಿವಾದ ಹೇಳಿ ಮಧ್ಯಾಹ್ನ 3-05 ಗಂಟೆಗೆ ಕಳುಹಿಸಿಕೊಟ್ಟಿರುತ್ತಾರೆ.